ಓ ಎಸ್ ನಂ.126/2023
ಪಿ.ಡಬ್ಲ್ಯೂ-1 ತೆಹರಾಬೇಗಂ ಗಂಡ ನವಾಬಸಾಬ

(ಇಂದು ದಿನಾಂಕಃ **28-07-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಕೆ ಪಿ ವಕೀಲರಿಂದ.</u>

ಸರ್ವೆ ನಂಬರ ೬೩/೫ ರಲ್ಲಿ ೬ ಎಕರೆ ೨೬ ಗುಂಟೆ ಇರುತ್ತದೆ. ಸರ್ವೆ ನಂಬರ ೬೩/೬ ರ ಎಷ್ಟು ಎಕರೆ ಇರುತ್ತದೆ ಮತ್ತು ಯಾರ ಹೆಸರಿನಲ್ಲಿದೆ ಎಂದು ಹೇಳಲು ಆಗುವುದಿಲ್ಲ. ಸರ್ವೆ ನಂಬರ ೧೫೭ ರಲ್ಲಿ ೩ ಹಿಸ್ಸೆಗಳಿರುತ್ತವೆ. ಸರ್ವೆ ನಂಬರ ೧೫೭ ರಲ್ಲಿ ೨೫ ಎಕರೆ ೫ ಗುಂಟೆ ಇರುತ್ತದೆ. ನನ್ನ ಮದುವೆ ಆಗಿ ಹೋದ ಮೇಲೆ ಈ ಕೇಸು ಹಾಕುವ ಮೊದಲು ನಾನು ಪಹಣಿಗಳನ್ನು ನೋಡಿರುತ್ತೇನೆ. ಆ ಮದ್ಯ ನಮ್ಮ ತಂದೆ ಇದ್ದುದರಿಂದ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಸಾಕ್ಷಿಯು ನಮ್ಮ ತಂದೆ ಜೀವಿತಾ ಇದ್ದಾಗ ನಾನೂಕೂಡಾ ದಾಖಲೆಗಳನ್ನು ನೋಡಿರುತ್ತೇನೆ ಎನ್ನುತ್ತಾರೆ. ಮಕ್ಕಳ ಹೆಸರಿನಲ್ಲಿ ಯಾವಾಗ-ಯಾವಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಹೇಳಲು ಗೊತ್ತಿಲ್ಲ. ಮದರಸಾಬರವರು ೪ ವರ್ಷಗಳ ಹಿಂದೆ ೨ನೇ ಲಾಕಡೌನ್ ಸಮಯದಲ್ಲಿ ಮೃತರಾಗಿರುತ್ತಾರೆ.

೨. ಪಹಣಿಗಳನ್ನು ತೆಗೆದ ನಂತರ ನನ್ನ ಸಹೋದರರು ಪಾಲು ವಿಭಾಗ ಮಾಡಿಕೊಂಡ ವಿಚಾರ ನನಗೆ ಗೊತ್ತಾಗಿರುತ್ತದೆ. ೧೯೮೮ ರಲ್ಲಿ ನಮ್ಮ ತಂದೆ ಮದರಸಾಬರವರ ಇದ್ದಾಗಲೆ ಅವರು ತಮ್ಮ ಮಕ್ಕಳಿಗೆ ಪಾಲು ಮಾಡಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಾಲುವಿಭಾಗವನ್ನು ಯಾವಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಫಕೀರಸಾಬ, ಮಷಾಕಸಾಬರವರ ಹೆಸರಿನಲ್ಲಿ ೩೫ ವರ್ಷಗಳ ಹಿಂದೆ ಪಹಣಿ ಆಗಿದ್ದವು ಎಂದರೆ ನನಗೆ

ಗೊತ್ತಿಲ್ಲ. ರೆಹಮಾನಸಾಬ, ಲಾಲಅಹಮದ ಮತ್ತು ಮೈನೋದ್ದೀನರವರ ಹೆಸರಿನಲ್ಲೂ ಕೂಡಾ ಸುಮಾರು ೩೫ ವರ್ಷಗಳ ಹಿಂದೆ ಪಹಣಿ ಆಗಿವೆ ಎಂದರೆ ನನಗೆ ಗೊತ್ತಿಲ್ಲ. ಪಹಣಿ ಮತ್ತು ಮುಟೇಷನಗಳನ್ನು ಬಿಟ್ಟು ಬೇರೆ ದಾಖಲೆಗಳನ್ನು ಹಾಕಿರುತ್ತೀರಾ ಎಂದರೆ ಸಾಕ್ಷಿಯು ನಮ್ಮ ಹಿಸ್ಸೆ ಇದೆ ಎಂಬ ದಾಖಲೆಗಳನ್ನು ಹಾಕಿರುತ್ತೇವೆ ಎನ್ನತ್ತಾರೆ.

೩. ನಮ್ಮ ತಂದೆ ಪಾಲು ಮಾಡಿಕೊಟ್ಟ ವಿಚಾರ ನನಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ೪೫ ವರ್ಷಗಳಿಂದ ಯಾವುದೇ ಪಾಲು ಕೇಳದೆ ಈಗ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ವಿಷಯಗಳು ನನಗೆ ಗೊತ್ತು. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಹಿಸ್ಸೆ ಎಂದು ನನ್ನ ಹಣ ನೀಡಿದ ಬಗ್ಗೆ ಮತ್ತು ಬೆಳೆಗಳಲ್ಲಿ ಪಾಲು ನೀಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ರಾಯಚೂರಿನಲ್ಲಿ ವಾಸವಿರುತ್ತೇನೆ. ನಾನು ನನ್ನ ಸಹೋದರಿ ಮೆಹಬೂಬಿರವರನ್ನು ದಾವೆ ಹಾಕುವ ವಿಚಾರವಾಗಿ ಕೇಳಿರುತ್ತೇನೆ.

೪. ಪ್ರತಿವಾದಿಗಳನ್ನು ೧ ರಿಂದ ೨ ವರ್ಷಗಳ ಹಿಂದೆ ನಾನು ಪಾಲು ಕೇಳಿರುತ್ತೇನೆ. ಸೂರ್ಯಕಾಂತರವರಿಗೆ ಜಮೀನು ಮಾರಾಟ ಮಾಡಿದ ವಿಚಾರ ನನಗೆ ಗೊತ್ತಾಗಿರುತ್ತದೆ. ಆ ಕುರಿತು ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ನನ್ನ ಸಹೋದರ ಪಕೀರಸಾಬರವರು ಸೂರ್ಯಕಾಂತರವರಿಗೆ ಜಮೀನು ಮಾರಾಟ ಮಾಡಿರುತ್ತಾರೆ. ಅವರು ಮೂರು-ಮೂರು ಎಕರೆ ಜಮೀನು ಮಾರಾಟ ಮಾಡಿರುತ್ತಾರೆ. ನಮ್ಮ ಸಂಬಂಧಿಕರ ಒಬ್ಬರ ಹೆಸರು ಕೂಡಾ ಪಕೀರಸಾಬ ಎಂದು ಇರುತ್ತದೆ. ನನ್ನ ಸಹೋದರ ಪಕೀರಸಾಬ ಜಮೀನು ಮಾರಾಟ ಮಾಡಿಲ್ಲ, ನಮ್ಮ ಸಂಬಂಧಿ ಮತ್ತೊಬ್ಬ ಪಕೀರಸಾಬ ಜಮೀನು ಮಾರಾಟ

ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಒಂದು ಸುಳ್ಳು ಕೇಸನ್ನು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.